# ಕಲ್ಪನೆ ಕವಿತೆ



## ಬೆಳಗು

ಮಂಜಿನಂಗಿ ತೊಟಗೊಂಡು ಕೆಂಪಮಾರಿ ಮಾಡಕೊಂಡು
ಮೂಡಲಮನಿ ಹಾದ್ಯಾಗ ಬಳುಕೋ ಬೆಳಕ ಬಳ್ಳಿ ನೋಡ
ಸೂರ್ಯನ ಗಡಗಿ ಹೊತ್ಕೊಂಡು ಕಿರಣದ ಸೀರಿ ಉಟ್ಕೊಂಡು
ಚೆಲುವಿ ಹುಡಗಿ ನಡೆದು ಬಂದ ಬೆಳ್ಳಂ ಬೆಡಗಿ ಬೆಳ್ಳಿ ನೋಡ..
ನಸುಕ ಮುಸುಕ ಸರಿಸಿ ತಾನು ಗುಡ್ಡದ ಬಾಜು ಹೆಜ್ಜೆಹಾಕಿ
ಕೂಸುಗೆಜ್ಜಿ ಕಾಲಕುಣಿಸಿ ಕುಣದಂಗ ಬಂತೋ ಮುಂಜಾವಣ್ಣಾ
ಚುಕ್ಕಿಯೆಲ್ಲಾ ಹಕ್ಕಿಯಾಗಿ ನಲಿದು ತಾವು ರೆಕ್ಕೆ ಬಿಚ್ಚಿ
ಆಕಾಶದಂಗಳದಾಗ ತೂಗೋ ಹಸೆಯ ಹಾಸ್ಯಾವಣ್ಣಾ....
ಬಾನ ನೀಲಿ ಕಡಲಿನಾಗ ಬೆಳ್ಳಿ ಹಡಗ ತೇಲತಾವ
ನೀರಿನಲೆ ಮಡಲಿನಾಗ ದೋಣಿ ಬೆಡಗ ಮೂಡ್ಯೆತಣ್ಣಾ
ಬಾನು ಭುವಿಯ ಉಸಿರ ಗಂಧ ಬಂಧವಾಗಿ ತೀಡತಾವ
ಬಿಂಬ ಪ್ರತಿಬಿಂಬದಂದ ಚೆಂದ ಬಣ್ಣ ತಳದೈತಣ್ಣಾ...
ಹುಟ್ಟಹಾಕೋ ಪುಟ್ಟಹುಡುಗ ಬೊಟ್ಟಮಾಡಿ ತೋರಿಸ್ಯಾನ
ಅಕ್ಕಾ ಪಕ್ಕಾ ರೆಕ್ಕೆ ಪುಕ್ಕಾ ಪಕ್ಷಿ ತೋರಣ ಕಟ್ಯಾವಣ್ಣಾ
ಒಳಗ ಹೊರಗ ಮ್ಯಾಗ ಕೆಳಗ ಬೆಳಗು ಕಣ್ಣು ಬಿಟ್ಟುತಾನ
ಹಕ್ಕಿ ಪಿಕ್ಕಿ ಹಾಡು ಮೊಳಗಿ ಬೆಳಕು ಕಹಳೆ ಊದೈತಣ್ಣಾ...
ಬೆಳಕ ಮಗ್ಗಿ ಹೂವಾಗರಳಿ ಹೊನ್ನ ಸುರುಳಿ ಪಕಳೆ ಬಿಡಿಸಿ
ಚಿಲಿಪಿಲಿ ಚಿಲಿಪಿಲಿ ಪಾಡಪಾಡಿ ಜಗದ ಕಿವಿಯ ತುಂಬ್ಯಾವಣ್ಣಾ
ಮುಗಿಲ ಬಣ್ಣ ಹಗಲ ಕಣ್ಣ ಪಡೆದು ಹಿಗ್ಗಿ ಸುಗ್ಗಿ ಮಾಡಿ
ದೋಣಿ ನಡೆಸಿ ದುಡಿದು ಬೇಗ ದಡವ ನಾವು ಸೇರೋಣಣ್ಣಾ ..
ಬೆರಕಿ ಬೆಳ್ಳಿ ಬೆಳಕ ಭಾನು ಹೊನ್ನ ಹಳಕ ಬೆರಕಿ ಮಾಡಿ
ಹಿಂದ ಮುಂದ ನೀರಿನಾಗ ಎರಕಾ ತಾನು ಹೊಯ್ದಾನಣ್ಣಾ....

**ಇಂದಿರಾ ಮೋಟೆಬೆನ್ನೂರ**

## ಕಾಲ ಎಂಬುದರ ಮೈ ಹಿಡಿದು

ಪ್ರಕೃತಿಯೂ ಹುಟ್ಟು ಹಾಕುತ್ತದೆ
ಆಗಾಗ ಇಂಥ ಬೆಳ್ಳಂ ಬೆಳಗುಗಳನ್ನು
ನಮ್ಮ ನಡುವೆ,
ಅಲ್ಲಿ ಹಕ್ಕಿಯೂ ರೆಕ್ಕೆ ಬಿಚ್ಚಿ ಹಾರಿ
ಚಿತ್ತಾರ ಬಿಡಿಸುತ್ತವೆ ತನ್ನ ಮನಸ
ಮಾರಿ;

ಪ್ರಕೃತಿ ಅಂದರೆ ಹಾಗೇನೇ
ಒಳಗೂ ಹೊರಗೂ ನದಿಯಾಗಿ
ಹುಟ್ಟುವುದು, ಹರಿಯುವುದು,
ಅರಳುವುದು, ಕೆರಳುವುದು
ಸಮುದ್ರವಾಗಿ ಹೊರಳುವುದು,
ತನ್ನ ಇತ್ತ ಬದಿಯಲ್ಲಿ
ಬೆಳಗ ಬೆಳಗಿಸಿ ಬೆಚ್ಚಿಸಿ,
ಅತ್ತ ತುದಿಯಲ್ಲಿ
ಮೊಲೆತೊಟ್ಟು ಶಿಶು ಸೂರ್ಯನ
ಬಾಯಲ್ಲಿಟ್ಟು
ಮಲಗಿಸುವುದು...

ವಾಚು ಹಿಡಿದು
ಲಗ್ಗೆ ಹಾಕುವ ಸೆಕೆಂಡುಗಳ
ಮಧ್ಯದಲ್ಲಿ
ಕಾಲ ಹುಡುಕುತ್ತಿದ್ದೇನೆ ನಾನು;
ಕಾಲವೋ
ಹಾರುಹಕ್ಕಿಯಾಗಿ, ನೀರಲೆಯಾಗಿ,
ಥಂಡಿಯ
ನಡುಕವಾಗಿ,
ಮುಗ್ಗು ಬಂದ ಕತ್ತಲ ಅಳಿಸುತ್ತಿದೆ
ಬೆಳಕನು ಬೆಳಗಿಸುತ್ತಿದೆ !

**ಶಿ. ಜು. ಪಾಶ**